# 20. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೊರಟಗೆರೆ ಶಿಕಾರಿಪುರ ತಾಲ್ಲೂಕು

ಪ್ರತಿವಾರವು ಪಠ್ಯ, ಸಹಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳನ್ನು ಹಮ್ಮಿಕೊಂಡು ಮಕ್ಕಳಿಗೆ ಬಹುಮಾನಗಳನ್ನು ನೀಡುತ್ತಿದ್ದೇವೆ. ನಲಿ ಕಲಿ ಕೊಠಡಿಯು ಮಕ್ಕಳ ಕಲಿಕೆಗೆ ಪೂರಕವಾಗುವಂತೆ ಶಿಕ್ಷಕರೆ ಕಡಿಮೆ ವೆಚ್ಚದಲ್ಲಿ ಟಿ,ಎಲ್,ಎಮ್‌ಗಳನ್ನು ರಚಿಸಿ ಬೋಧನೆ ಮಾಡುತ್ತಿದ್ದಾರೆ. ಅಲ್ಲದೆ ಮಕ್ಕಳು ರಚಿಸಿದ ಕ್ರಾಫ್ಟ್‌ವರ್ಕ್‌ಗಳನ್ನು ಇಲ್ಲಿ ಕಾಣಬಹುದಾಗಿದೆ.





ಮದ್ಯಾಹ್ನ ಬಿಸಿಊಟ ನಿರ್ವಹಣೆಗೆ ಶಾಲೆಯಲ್ಲಿ ಮಕ್ಕಳ ಸಹಾಯದೊಂದಿಗೆ ವಿವಿಧ ರೀತಿಯ ಸೊಪ್ಪು ಹಾಗೂ ತರಕಾರಿಗಳನ್ನು ನಮ್ಮ ಶಾಲಾ ಆವರಣದಲ್ಲಿಯೇ ಬೆಳೆಯುತ್ತಿದ್ದೇವೆ. ನಮ್ಮ ಶಾಲೆಯಲ್ಲಿ ಸುಮಾರು ೧೫೦ ರಿಂದ ೨೦೦ ಗಿಡಗಳನ್ನು ಪೋಷಿಸುತ್ತಿದ್ದು ವಿವಿಧ ರೀತಿಯ ಗಿಡಗಳನ್ನು ಕಾಣಬಹುದಾಗಿದೆ. ಅವುಗಳಲ್ಲಿ ಮುಖ್ಯವಾಗಿ ತೆಂಗು, ಮಾವು, ಹಲಸು, ಅಡಿಕೆ, ನೇರಳೆ, ಸಪೋಟಾ, ಪೇರಲಾ, ಬಾದಾಮಿ, ಬೇವು, ಗಿಡಗಳು ಶಾಲೆಯನ್ನು ಹಸಿರಿನಿಂದ ಶೃಂಗರಿಸಿವೆ. ಅಲ್ಲದೆ ಹಲವು ರೀತಿಯ ಹೂಗಿಡಗಳನ್ನು ಶಾಲಾ ಆವರಣದಲ್ಲಿ ಬೆಳೆಸಲಾಗಿದೆ ಅವುಗಳಲ್ಲಿ ಮಲ್ಲಿಗೆ, ಸಂಪಿಗೆ, ಸೇವಂತಿಗೆ, ದಾಸವಾಳ, ಗುಲಾಬಿ ಮುಖ್ಯವಾದವುಗಳು.



**"ಕಲಿಕೆಗೂ ಪ್ರೋತ್ಸಾಹ"**

ಮಕ್ಕಳಲ್ಲಿ ಕಲಿಕೆ ಉತ್ತಮ ಪಡಿಸಲು ಶಾಲೆಯಲ್ಲಿ reading, writing, dictation, dictionary works, quiz, story narrating, scince experimentsಗಳಲ್ಲಿ ಮಕ್ಕಳನ್ನು ತೊಡಗಿಸಲಾಗುತ್ತದೆ. ಮಕ್ಕಳು ಪ್ರತಿಭಾ ಕಾರಂಜಿಯಲ್ಲಿ ಸತತವಾಗಿ ಮೂರು ವರ್ಷದಿಂದ ಜಿಲ್ಲಾಹಂತದಲ್ಲಿ ಪ್ರಥಮ ಸ್ಥಾನವನ್ನು ಪಡೆಯುತ್ತಿದ್ದಾರೆ ಹಾಗೂ ಕ್ರೀಡೆಗಳಲ್ಲು ತಾಲ್ಲೂಕ ಹಂತದಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದಿದ್ದಾರೆ.



ಪ್ರತಿವರ್ಷ ಶಾಲೆಯಲ್ಲಿ ವಿಶೇಷವಾಗಿ ವಾರ್ಷಿಕೋತ್ಸವ ಹಮ್ಮಿಕೊಳ್ಳಲಾಗುತ್ತಿದ್ದು, ಅದರಲ್ಲಿ ಜಾನಪದ ನೃತ್ಯ , ವಚನ ಗಾಯನ, ಸಂಸ್ಕೃತ ಪಠಣ, ಯೋಗ ಪ್ರದರ್ಶನ, ರೂಪಕಗಳು, ದೇಶಭಕ್ತಿ ಗೀತೆಗಳು, ಕೋಲಾಟ, ಡಂಬಲ್ಸ್, ಲೇಜಿಮ್ ಹಾಗೂ ಇಂಗ್ಲೀಷ್ ಸ್ಕಿಟ್‌ಗಳನ್ನು ನಮ್ಮ ವಿದ್ಯಾರ್ಥಿಗಳು ಪ್ರದರ್ಶಿಸುತ್ತಿದ್ದಾರೆ.

ಶಾಲೆಯಲ್ಲಿರಾಷ್ಟ್ರೀಯ ಹಬ್ಬಗಳು,ನಾಡಹಬ್ಬಗಳು,ವಿವಿಧ ರೀತಿಯ ಆಚರಣೆಗಳನ್ನು ಅರ್ಥಗರ್ಭಿತವಾಗಿ ಹಮ್ಮಿಕೊಳ್ಳಲಾಗುತ್ತಿದ್ದು ಇವುಗಳ ಬಗ್ಗೆ ಮಕ್ಕಳಲ್ಲಿ ಅರಿವುಮೂಡಿಸಲಾಗುತ್ತದೆ.

## English Magzin ಗಳ ಬಿಡುಗಡೆ

**ನಮ್ಮ ವಿದ್ಯಾರ್ಥಿಗಳು ವರ್ಷಕ್ಕೆ ಎರಡರಂತೆ ಇಂಗ್ಲೀಷ್ ಸಂಚಿಕೆಯನ್ನು ಬಿಡುಗಡೆ ಮಾಡುತ್ತಿದ್ದಾರೆ.**







**ಅತ್ಯುತ್ತಮ ಶಾಲಾ ಪ್ರಶಸ್ತಿಯ ಗರಿಮೆ**

**2018 ಜುಲೈನಲ್ಲಿ ಡಯಟ್ ವತಿಯಿಂದ ಏರ್ಪಡಿಸಿದ್ದ 'ಸ್ಪಂದನಾ' ಕಾರ್ಯಕ್ರಮ ದಡಿಯಲ್ಲಿ ಮಳವಳ್ಳಿ ಹಾಗೂ ಸುಣ್ಣದ ಕೊಪ್ಪ ಕ್ಲಸ್ಟರ್ ಮಟ್ಟದ ಶಾಲೆಗಳ ಶೈಕ್ಷಣಿಕ ಆಡಳಿತ ಹಾಗೂ ಶಾಲಾ ಪರಿಸರಗಳನ್ನು ಅವಲೋಕಿಸಿ ಅತ್ಯುತ್ತಮ ಶಾಲೆ ಎಂದು ಪ್ರಶಸ್ತಿಯನ್ನು ನೀಡಿ ನಮ್ಮ ಹೆಚ್ಚಿನ ಕಾರ್ಯಕ್ಕೆ ಸ್ಪೂರ್ತಿದಾಯಕರಾಗಿದ್ದಾರೆ.**

**ಕಂಪ್ಯೂಟರ್ ಕಲಿಕೆ :-** ಶಾಲೆಯಲ್ಲಿ ದಾನಿಗಳು ನೀಡಿದ ಕಂಪ್ಯೂಟರ್ ಬಳಸಿಕೊಂಡು ವಾರಕ್ಕೊಂದು ಅವದಿಯಂತೆ ಎಲ್ಲಾ ಮಕ್ಕಳಿಗೂ ಕಂಪ್ಯೂಟರ್ ಕುರಿತಾದ ಜ್ಞಾನವನ್ನು ನೀಡುತ್ತಿದ್ದೇವೆ.

**ಓರೆಗಾಮಿ ಕಲಿಕೆ :-** ಮಕ್ಕಳು ಕಾಗದದಿಂದ ಟೇಬಲ್, ಚೇರ್, ಡೆಸ್ಕ್, ಹೂವು, ಮಾಲೆ, ತರಕಾರಿಗಳ ಮಾದರಿಗಳನ್ನು ಮಾಡುವಂತೆ ಪ್ರೇರೇಪಿಸಲಾಗುತ್ತಿದೆ.

## ಮೂಲಭೂತ ಸೌಕರ್ಯಗಳ ಅಭಿವೃದ್ಧಿ

ಶಾಲೆಯ ಪರಿಸರವನ್ನು ಉತ್ತಮ ಪಡಿಸಲು ಶಾಲೆಯಲ್ಲಿ ಪ್ರತಿವರ್ಷ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ನಮ್ಮ ವ್ಯಾಪ್ತಿಯ ತಾಲ್ಲೂಕ ಪಂಚಾಯಿತಿ ಸದಸ್ಯರಾದ ಶ್ರೀಯುತ ಶಂಭು ಆರ್.ಕೆ ರವರು ತಮ್ಮ ಅನುದಾನದಲ್ಲಿ ಶಾಲೆಗೆ ಬಣ್ಣದ ವ್ಯವಸ್ಥೆ ಮಾಡಿದ್ದಾರೆ ಹಾಗೂ ಪ್ರಸ್ತುತ ವರ್ಷ ನೆಲಕ್ಕೆ ಟೈಲ್ಸ್ ವ್ಯವಸ್ಥೆ ಮಾಡಲಾಗುತ್ತಿದೆ.



ಶಾಲೆಯಲ್ಲಿ ಚಟುವಟಿಕೆ ಆಧಾರಿತ ಬೋಧನೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ








ಹೀಗೆ ನಮ್ಮ ಶಾಲೆಯ ಯಶಸ್ಸಿನ ನಾಗಲೋಟದ ಹಿಂದೆ ಅನುಭವಿ ಮುಖ್ಯ ಶಿಕ್ಷಕಿಯರಾದ ಶ್ರೀಮತಿ ನಾಗಮ್ಮಎನ್, ಸಹ ಶಿಕ್ಷಕರಾದ ನಾಗೇಂದ್ರಪ್ಪ, ಬಸವನಗೌಡ, ವಿಜಯ್‌ಕುಮಾರ್ ಹಾಗೂ ಶ್ರೀಮತಿ ಶೈಲಾ ಇವರ ಶ್ರಮ ಶ್ಲಾಘನೀಯ.